Civil Services (Main) Examination, 2024

**PHKM-B-KND**

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / ( LITERATURE )

ವೇಳೆ : **ಮೂರು ಗಂಟೆ**
*Time Allowed : **Three** Hours*

ಗರಿಷ್ಠ ಅಂಕಗಳು : **250**
*Maximum Marks : **250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) ಭೇದಿಸಲೆಂದ ದಲ್ ನುಡಿದರೆನ್ನದಿರೊಯ್ಯನೆ ಕೇಳಕರ್ಣ ನಿ
ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಿಹರ್ಪತಿ ಪಾಂಡುನಂದನರ್
ಸೋದರರೆಯ್ದೆ ಮಯ್ದುನನೆನಾಂ ಪೇೞುತೇಂ ಪಡೆಮಾತೊನಿನ್ನದಿ
ಮೇದಿನಿ ಪಟ್ಟಮಂ ನಿನತೆ ನೀನಿರೆ ವಾತ್ತೆ ಪೆಱರ್ ನರೇಂದ್ರರೇ *10*

(b) ನೆಲದೊಳರ್ಧವನೀವುದಿಲ್ಲಾ
ಸ್ಥಳವನೈದನು ಮುನ್ನ ಕೊಡೆನೆ
ನ್ನಿಳೆಯ ಭಾಗವನೀಸ ಕೊಟ್ಟಡೆ ನಿನ್ನ ಮೇಲಾಣೆ।
ನೆಲನ ಕಡೆಯಲಿ ಮುಳ್ಳು ಮೊನೆಯು
ಚ್ಚಳಿಪ ಧರಣಿಯನಿತ್ತನಾದರೆ
ಬಳಿಕ ನೀನಗು ಹೋಗು ಕದನವ ಕೊಂಡು ಬಾ ಎಂದ॥ *10*

(c) ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
ಇದು ಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ
ಎನ್ನೊ ಡಲನುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ *10*

(d) ಬೆಳಗಿನೊಳೋಲಾಡುವಂತೆ ಸಂಗೀತದ
ಸುಳಿಯೊಳು ತೇಲಾಡುವಂತೆ
ತೆಳುಗಾಳಿಯೇರಿ ವೈಹಾವಳಿಯ ಮಾಡುವಂ
ತೆಳೆವೆಂಗಳರಸಿ ಹಾಡಿದಳು *10*

(e) ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
ಗಡಿನ ನೆಗೞ್ತೆಯ ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್॥ *10*

**Q2.** ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :

(a) ಪಂಪನ 'ವಿಕ್ರಮಾರ್ಜುನ ವಿಜಯ' ದ ಹದಿಮೂರನೆಯ ಆಶ್ವಾಸದಲ್ಲಿ ಚಿತ್ರಿತವಾದ ದುರ್ಯೋಧನನ ವ್ಯಕ್ತಿತ್ವದ ವೈಶಿಷ್ಟತೆಯನ್ನು ವಿವರಿಸಿ. *20*

(b) 'ವಡ್ಡಾರಾಧನೆ' ಯ ವಿದ್ಯುಚ್ಚೋರ ಕಥೆಯಲ್ಲಿ ನಿರೂಪಿತವಾಗಿರುವ ಜೈನಧರ್ಮದ ತತ್ವ ಸಿದ್ಧಾಂತಗಳ ಪರಿಣಾಮ ತೀವ್ರತೆಯನ್ನು ಕುರಿತು ಸಮಾಲೋಚಿಸಿ. *20*

(c) 'ಭರತೇಶ ವೈಭವ' ಕಾವ್ಯದ ವೈಶಿಷ್ಟತೆ. *10*

**Q3.** ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :

(a) ಶೃಂಗಾರ ಮತ್ತು ಭಕ್ತಿಯ ವಿವಿಧ ಸ್ವರೂಪಗಳು ಹರಿಹರನ ನಂಬಿಯಾಣ್ಣನ ರಗಳೆಯಲ್ಲಿ ನಿರೂಪಿತ ವಾಗಿರುವ ಬಗೆಯನ್ನು ವಿಶ್ಲೇಷಿಸಿ. *20*

(b) ದಾಸಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಧೋರಣೆಗಳನ್ನು ನಿದರ್ಶನಗಳೊಂದಿಗೆ ಪರಾಮರ್ಶಿಸಿ. *20*

(c) 'ಸಾಮಾಜಿಕ ಸಾಮರಸ್ಯವೇ ಶರಣರ ವಚನಗಳ ಪ್ರಮುಖ ಆಶಯವಾಗಿದೆ' – ಚರ್ಚಿಸಿ. *10*

**Q4.** ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :

(a) ಕುಮಾರವ್ಯಾಸ ಭಾರತದ ಕರ್ಣ 'ಒಬ್ಬ ದುರಂತ ನಾಯಕ' – ಚರ್ಚಿಸಿ. *20*

(b) ಮಹಿಳಾ ವಚನಕಾರ್ತಿಯರ ಅಭಿವ್ಯಕ್ತಿಗೆ ಸತಿಪತಿ ಭಾವದ ಭಕ್ತಿಯೇ ಮೂಲ ಧಾತುವಾಗಿದೆ – ಪರಿಶೀಲಿಸಿ. *20*

(c) ಕೆಳವರ್ಗದ ವಚನಕಾರರ 'ಕಾಯಕ' ಸಂವೇದನೆಗಳು ಅವರ ವಚನಗಳಲ್ಲಿ ಮೂಡಿ ಬಂದಿರುವ ಬಗೆಯನ್ನು ಪರಾಮರ್ಶಿಸಿ. *10*

## SECTION B

**Q5.** **ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.**

**(ಪ್ರತಿಯೊಂದೂ 150 ಪದಗಳ ಮಿತಿಯ ಉತ್ತರವಾಗಿರಲಿ)** *10×5=50*

(a) ಕನಕದಾಸರ ಕೀರ್ತನೆಗಳ ತಾತ್ವಿಕ ಚಿಂತನೆ *10*

(b) ಸಣ್ಣಕತೆಗಳು ಹಾಗು ಮಾಸ್ತಿ *10*

(c) ದಲಿತ–ಬಂಡಾಯ ಕಾವ್ಯಗಳ ಸ್ವರೂಪ ಮತ್ತು ತಾತ್ವಿಕತೆ *10*

(d) ಜೀಶಂಪ ಸಂಪಾದಿತ 'ಕನ್ನಡ ಜನಪದ ಕಥೆಗಳ' ವಿಶೇಷತೆ *10*

(e) ದೇಜಗೌ ಸಂಪಾದಿಸಿರುವ 'ಜನಪದ ಗೀತಾಂಜಲಿ' ಸಂಕಲನದ ವಿಶಿಷ್ಟತೆ *10*

**Q6.** **ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :**

(a) ನವೋದಯ ಮತ್ತು ನವ್ಯಕವಿತೆಗಳ ಸ್ವರೂಪ ಹಾಗೂ ತಾತ್ವಿಕತೆಗಳ ಹಿನ್ನೆಲೆಯಲ್ಲಿ ಅವುಗಳ ಪ್ರಮುಖ ವ್ಯತ್ಯಾಸಗಳನ್ನು ಗುರುತಿಸಿ. *20*

(b) ಹಾಮಾನಾ ಅವರ 'ಜಾನಪದಸ್ವರೂಪ' ಪುಸ್ತಿಕೆಯು ಕನ್ನಡ ಜಾನಪದ ಅಧ್ಯಯನಕ್ಕೆ ಹೇಗೆ ಮೌಲಿಕವಾಗಿದೆ – ವಿಶ್ಲೇಷಿಸಿ. *20*

(c) 'ಗಾದೆಗಳು' ಜನಪದರ ಜೀವನಾನುಭವ ಹಾಗೂ ಸಾಮಾಜಿಕ ಮೌಲ್ಯಗಳನ್ನು ಹೇಗೆ ಗರ್ಭೀಕರಿಸಿಕೊಂಡಿವೆ – ನಿಮ್ಮ ಪಠ್ಯಗಳನ್ನಾಧರಿಸಿ ವಿವೇಚಿಸಿ. *10*

**Q7.** **ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :**

(a) ದಲಿತ ಬದುಕಿನ ಜೀವಂತ ಚಿತ್ರಣವನ್ನು ದಾಖಲಿಸುವಲ್ಲಿ 'ಒಡಲಾಳ' ಹೇಗೆ ಯಶಸ್ವಿಯಾಗಿದೆ ? ಸಮಾಲೋಚಿಸಿ. *20*

(b) ಸುಖದುಃಖದಲ್ಲಿ ಬದುಕು ಹದವಾಗುವ ಬಗೆಯನ್ನು 'ಬೆಟ್ಟದಜೀವ' ಕಾದಂಬರಿಯ ಹಿನ್ನೆಲೆಯಲ್ಲಿ ಚರ್ಚಿಸಿ. *20*

(c) ಸ್ತ್ರೀವಾದಿ ಚಿಂತನೆಗೆ ಅನುಪಮಾ ನಿರಂಜನರ 'ಮಾಧವಿ' ಕಾದಂಬರಿ ಹೇಗೆ ಪೂರಕ–ಪ್ರೇರಕವಾಗಿದೆ ಎಂಬುದನ್ನು ವಿವರಿಸಿ. *10*

Q8. ಕೆಳಗಿನ ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ :

(a) ಮನುಷ್ಯ ಧರ್ಮದ ತಾಕಲಾಟಗಳು ಕಾರ್ನಾಡರ 'ತುಘಲಕ್' ನಾಟಕದಲ್ಲಿ ಹೇಗೆ ಚಿತ್ರಣಗೊಂಡಿವೆ ? ಪರಾಮರ್ಶಿಸಿ. *20*

(b) 'ಶೂದ್ರತಪಸ್ವಿ' ನಾಟಕದ ಸಾಮಾಜಿಕ ನೆಲೆಗಳನ್ನು ಸಾಧಾರವಾಗಿ ಗುರುತಿಸಿ. *20*

(c) ದೇವರ ಅಸ್ತಿತ್ವ ಕುರಿತು ಎ.ಎನ್. ಮೂರ್ತಿ ರಾಯರ ವೈಚಾರಿಕ ನಿಲುವುಗಳೇನು ? ವಿವೇಚಿಸಿ. *10*